ಖಿಳಗಾಂವ ಬಸವೇಶ್ವರ್ ಏತ ನೀರಾವರಿ ಕಾಮಗಾರಿಯನ್ನು ಪೂರ್ಣಗೊಳಿಸುವುದು

996(537); ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ)

ಅ) ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನಲ್ಲಿ ಬಸವೇಶ್ವರ ಏತ ನೀರಾವರಿ ಕಾಮಗಾರಿಯನ್ನು ಪೂರ್ಣಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ

ಆ) ಹಾಗಿದ್ದಲ್ಲಿ, ಖಿಳೆಗಾಂವ ಏತ ನೀರಾವರಿ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು

ಇ) ಇದಕ್ಕೆ ತಗಲುವ ವೆಚ್ಚವೆಷ್ಟು (ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀ M.B. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) **ಮತ್ತು** ಆ) ಬಸವೇಶ್ವರ (ಕೆಂಪವಾಡ) ಏತ ನೀರಾವರಿ ಯೋಜನೆಯ ಒಟ್ಟು ರೂ.1120.36 ಕೋಟಿಗಳ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಸದರಿ ಕಾಮಗಾರಿಗೆ 2015–16ನೇ ಸಾಲಿನಲ್ಲಿ ರೂ.3000.00 ಲಕ್ಷ ಅನುದಾನ ನಿಗಧಿ ಮಾಡಲಾಗಿದೆ.

ಇ) 2012–13 ರ ಜಲಸಂಪನ್ಮೂಲ ಇಲಾಖೆಯ ದರಪಟ್ಟಿಯನ್ವಯ ಈ ಯೋಜನೆಯ ವಿವರವಾದ ಯೋಜನಾ ವರದಿಯಲ್ಲಿಯ ಅಂದಾಜು ಮೊತ್ತ ರೂ.1120.36 ಕೋಟಿಗಳಾಗಿರುತ್ತದೆ.